ಹೇಳಿದ್ದೀರೋ ಅದನ್ನೇ ಸಹ ಇಲ್ಲಿ ಶಾಸನಸಭೆಯಲ್ಲಿಯೋ ಹೇಳಿದ್ದೀರಿ. ಕಳೆದ ಮೂರು ತಿಂಗಳುಗಳಿಂದಲೂ ಇದನ್ನೇ ತಾವು ಹೇಳುತ್ತಾ ಬಂದಿದ್ದೀರಿ. ತಮ್ಮ ಸ್ಟೇಟ್ ಮೆಂಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎನ್ನುವ ಬಗ್ಗೆ ಏನನ್ನೂ ಹೇಳಿಲ್ಲ.ಈಗ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುತ್ತದೆ ಎನ್ನುವುದನ್ನು ಹೇಳಿ?

ಶ್ರೀ ಕೆ.ಜೆ. ಜಾರ್ಜ್ : ಸರ್ಕಾರದಿಂದ ಬೆಂಗಳೂರು ನಗರ ನೀರು ಸರಬರಾಜು ಮಂಡಲಿಗೆ 1 ಕೋಟಿ 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದೇ ರೀತಿ ಬಿ.ಡಿ.ಎ.ದಿಂದ 75ಲಕ್ಷ ಮತ್ತು ಕಾರ್ಪೋರೇಷನ್‌ನಿಂದ ಬೆಂಗಳೂರು ನಗರ ನೀರು ಸರಬರಾಜು ಮಂಡಲಿಗೆ ಮಿನಿವಾಟರ್ ಸಪ್ಲೈಗೆ 35 ಲಕ್ಷ ರೂಪಾಯಿಗಳನ್ನು ಮಾಡುವಂತಹ ಕೆಲಸ ಮಾಡಿದ್ದೇವೆ. ಮತ್ತೆ ಕಾರ್ಪೋರೇಷನ್‌ನವರು 300 ಕೊಳವೆ ಬಾವಿಗಳನ್ನು ತೆಗೆಯತಕ್ಕಂಥ ಕೆಲಸ ಮಾಡಿದ್ದಾರೆ.

(2) ಮಂಗಳೂರು ಮಹಾನಗರ ಪ್ರದೇಶದಲ್ಲಿ ಬರುವ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ ಮಂಗಳೂರು ಮಹಾನಗರ ಪ್ರದೇಶದಲ್ಲಿ ಬರುವ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆಯ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಮಂಗಳೂರು ನಗರಕ್ಕೆ ನೀರು ಸರಬರಾಜನ್ನು ನೇತ್ರಾವತಿಯಿಂದ ತುಂಬೆಯ ಬಳಿ ಇರುವ ಎರಡು ಮೂಲ ಸ್ಥಾವರಗಳಿಂದ ಮಾಡಲಾಗುತ್ತಿದೆ. ಇವುಗಳಲ್ಲಿ ಒಂದು ಮೂಲ ಸ್ಥಾವರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದ್ದು ಇನ್ನೊಂದು ಮೂಲಸ್ಥಾವರವನ್ನು ಮಂಗಳೂರು ನಗರಸಭೆಯವರೇ ನಿರ್ವಹಿಸುತ್ತಿದ್ದಾರೆ. ಮೇಲಿನ ಜಲಮೂಲಗಳಿಂದ ಕ್ರಮವಾಗಿ ದಿನಂಪ್ರತಿ 18 ದಶಲಕ್ಷ ಗ್ಯಾಲನ್ ಮತ್ತು 2.25 ದಶಲಕ್ಷ ಗ್ಯಾಲನ್ ನೀರನ್ನು ಪಂಪು ಮಾಡಲು ವಿನ್ಯಾಸಗೊಳಿಸಲಾಗಿದೆ. ಇತ್ತೀಚೆಗೆ ಎರಡು ತಿಂಗಳುಗಳಿಂದ ಪ್ರತಿದಿನ ಸುಮಾರು 5.00 ಘಂಟೆಗಳ ಕಾಲ ವಿದ್ಯುತ್ ಕಡಿತವಿದ್ದು, ಹಾಗೂ ವಿದ್ಯುತ್ ವೋಲ್ಟೇಜಿನಲ್ಲಿ ಕಡಿಮೆಯಾಗುತ್ತಿರುವ ಕಾರಣಗಳಿಂದ ದಿನಂಪ್ರತಿ ಕೇವಲ 17 ಘಂಟೆಗಳ ಕಾಲ ಮಾತ್ರ ನೀರನ್ನು ಪಂಪು ಮಾಡಲಾಗುತ್ತಿದೆ. ಇದರಿಂದಾಗಿ ಮಂಡಳಿಯು ನಿರ್ವಹಿಸುತ್ತಿರುವ ಮೂಲ ಸ್ಥಾವರದಿಂದ ದಿನಂಪ್ರತಿ 13 ದಶಲಕ್ಷ ಗ್ಯಾಲನ್ ನೀರು ಮಾತ್ರ ದೊರಕುತ್ತಿದೆ. ಈ 13 ದಶಲಕ್ಷ ಗ್ಯಾಲನ್ ನೀರಿನ ಪ್ರಮಾಣದಲ್ಲಿ 7 ದಶಲಕ್ಷ ಗ್ಯಾಲನ್ ನೀರನ್ನು ಮಂಗಳೂರು ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ಮಂಗಳೂರು ನಗರಸಭೆಯವರು ನಿರ್ವಹಿಸುತ್ತಿರುವ ಮೂಲ ಸ್ಥಾವರದಿಂದ ದಿನಂಪ್ರತಿ ಕೇವಲ 1.5 ದಶಲಕ್ಷ ಗ್ಯಾಲನ್ ನೀರನ್ನು ಪಂಪು ಮಾಡಲಾಗುತ್ತಿದೆ. ಈ ನಗರದ ವಿತರಣಾ ವ್ಯವಸ್ಥೆಯನ್ನು ನಗರಸಭೆಯೇ ನಿರ್ವಹಿಸುತ್ತಿದೆ. ನಗರದ ಕೆಲವು ಪ್ರದೇಶಗಳಲ್ಲಿ ಹಾಲಿ ವಿತರಣಾ ವ್ಯವಸ್ಥೆಯೂ ಸಮರ್ಪಕವಾಗಿಲ್ಲದಿರುವುದರಿಂದ, ಈ ಕೆಳಕಂಡ ಪ್ರದೇಶಗಳಲ್ಲಿ ನೀರಿನ ಸರಬರಾಜು ಸರಿಯಾಗಿಲ್ಲ.

1) ಪಣಂಬೂರು 2) ಸುರತ್ಕಲ್ 3) ಬೈಕಂಪಾಡಿ 4) ಶ್ರೀನಿವಾಸನಗರ

ಮಂಗಳೂರು ನಗರದ ವಿತರಣಾ ಕೊಳವೆ ಮಾರ್ಗದ ವ್ಯವಸ್ಥೆಯನ್ನು ಉತ್ತಮ ಪಡಿಸಲು ಸರ್ಕಾರವು ಆದೇಶ ಸಂಖ್ಯೆ ವನಇ 214 ಯುಎಂಎಸ್ 89, ದಿನಾಂಕ 30-3-90ರಲ್ಲಿ 14.00 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಈ ಯೋಜನೆಗೆ ಟೆಂಡರ್ ಗಳನ್ನು ಕರೆಯಲಾಗಿದ್ದು

ಜೀವವಿಮಾ ನಿಗಮದಿಂದ ಹಾಗೂ ಮಂಗಳೂರು ಮಹಾನಗರಪಾಲಿಕೆಯವರಿಂದ ಹಣ ಬಂದ ನಂತರ ಕೆಲಸವನ್ನು ತೆಗೆದುಕೊಳ್ಳಲಾಗುವುದು.

+ ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಹೇಳಿದಂತೆ ಮಂಗಳೂರು ನಗರದಲ್ಲಿ ನೀರು ಸರಿಯಾಗಿ ಬರುವುದಿಲ್ಲ. ಮಾನ್ಯ ಸಚಿವರು ಹೇಳಿದಂತೆ ಪಣಂಬೂರು, ಸುರತ್ಕಲ್, ಬೈಕಂಪಾಡಿ ಹಾಗೂ ಶ್ರೀನಿವಾಸ ನಗರ ಇವು ರಾಷ್ಟ್ರ ಮಟ್ಟದಲ್ಲಿ ಬಹು ಪ್ರಮುಖವಾದ ಪ್ರದೇಶಗಳಾಗಿವೆ. ನ್ಯೂ ಮಂಗಳೂರು ಪೋರ್ಟ್ ಎಂ.ಸಿ.ಎಫ್. ಮತ್ತು ಕುದುರೆ ಮುಖ ಇಲ್ಲಿ ಫ್ಯಾಕ್ಟರಿಗಳು ಇವೆ. ಇಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ನೀರಿನ ವ್ಯವಸ್ಥೆ ಸರಿಯಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ 14 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ ಇದು ನಿಜವಾಗಿಯೂ ಸಂತೋಷ ಈಗ ಮಾನ್ಯ ಸಚಿವರು ಮಾತನಾಡುತ್ತಾ ಬೆಂಗಳೂರು ನಗರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಕೆಲವು ಯೋಜನೆಗಳಿಗೆ 1984-85ರಲ್ಲಿ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ ಎಂದು ಹೇಳುತ್ತಿದ್ದರು. ಇದಕ್ಕೆ ಫೈನಾನ್ಸ್ ಅಪ್ರೂವ್‌ವನ್ನು ಆದಷ್ಟು ಬೇಗ ಮಾಡಿ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆಲಸವನ್ನು ಪೂರೈಸಬೇಕಾದರೆ ಇನ್ನೂ ನಾಲ್ಕೈದು ವರ್ಷಗಳಾದರೂ ಆಗಬಹುದು. ಇದು ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಬೆಂಗಳೂರು ನಗರಕ್ಕೆ ಯಾವ ರೀತಿಯಾದ ಸೌಲಭ್ಯವನ್ನು ಕೊಡಲಾಗುತ್ತಿದೆಯೋ ಅದೇ ರೀತಿ ಮಂಗಳೂರು ಹಾಗೂ ಮತ್ತಿತರ ಪ್ರದೇಶಗಳಿಗೂ ಸವಲತ್‌ನ್ನು ಕೊಡಬೇಕು. ಕೊನೆಯ ಪಕ್ಷ 10 ನೀರಿನ ಟ್ಯಾಂಕರುಗಳನ್ನಾದರೂ ಮಂಗಳೂರಿಗೆ ಒದಗಿಸಿಕೊಡಬೇಕು. ಬೆಂಗಳೂರಿನಲ್ಲಿ ಈ ನೀರಿನ ವ್ಯವಸ್ಥೆಯನ್ನು ಸರಿಮಾಡಲಿಕ್ಕೆ ಯಾವ ರೀತಿ ಕಂಟ್ರೋಲ್ ವ್ಯವಸ್ಥೆ ಇಟ್ಟಿದ್ದೀರೋ ಅದೇ ರೀತಿ ಕಂಟ್ರೋಲ್ ವ್ಯವಸ್ಥೆಯನ್ನು ಮಂಗಳೂರಿನಲ್ಲೂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ನೀರಿನ ಸಮಸ್ಯೆ ಬಗ್ಗೆ ನಾನು ಒಂದು ಕವನವನ್ನು ರಚನೆ ಮಾಡಿದ್ದೇನೆ. ಅದನ್ನು ಇಲ್ಲಿ ಓದುತ್ತೇನೆ.

"ಜೀವಿಸಲು ಬೇಕು ಗಾಳಿ, ಅನ್ನ ನೀರು;
ನೀರಿಲ್ಲದೆ ತೊಳಲುತ್ತಿದೆ ನವ ಮಂಗಳೂರು
ವಿಶಾಲ ಸಾಗರದ ಶೂನ್ಯ ನೋಟ ಆ ಜನರಿಗೆ
ಆದರೆ ಫಲದಾಯಕವಲ್ಲವದು ಕುಡಿಯುವ ನೀರಿಗೆ;
ಕುಡಿಯುವ ನೀರಿಲ್ಲದೆ ಜನತೆಯ ಪರದಾಟ
ಘಟನ ಸರ್ಕಾರ ಸುಮ್ಮನಾದರೆ ಅದು ಬೆಕ್ಕಿನ ಚಿಲ್ಲಾಟ;
ಅನ್ನ ಗಾಳಿಯ ಸಮಸ್ಯೆ ನಾಳೆ ಪರಿಶೀಲಿಸುವಿರಂತೆ
ನೀರನ್ನುಣಿಸಿ ಬದುಕಿಸಲು ನಡೆಸುವಿರ ತೀವ್ರ ಚಿಂತೆ"

ದಯವಿಟ್ಟು ಇದರ ಬಗ್ಗೆ ಚಿಂತನೆ ಮಾಡಿ. ಕಳೆದ ವರ್ಷ ನೀರಿನ ಸಮಸ್ಯೆ ಇಷ್ಟು ತೀವ್ರವಾಗಿರಲಿಲ್ಲ. ನೀರಿನ ಸಮಸ್ಯೆಗೆ ಬೆಂಗಳೂರು ನಗರಕ್ಕೆ ಯಾವ ರೀತಿ ಸೌಲಭ್ಯ ಕೊಡುತ್ತಿದ್ದೀರೋ ಅದೇ ರೀತಿ ಮಂಗಳೂರು ಮತ್ತು ಮತ್ತಿತರ ನಗರಗಳಿಗೂ ಆಧ್ಯತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಂಗಳೂರು ನಗರದ ನೀರಿನ ವಿತರಣೆಯ ಜವಾಬ್ದಾರಿಯು ಸಂಪೂರ್ಣವಾಗಿ ಮಂಗಳೂರಿನ ಮಹಾನಗರ ಪಾಲಿಕೆಗೆ ಇರುತ್ತದೆ. ವಿದ್ಯುತ್ ಕಡಿತದಿಂದ ಉಂಟಾಗಿರುವ ತೊಂದರೆಯಿಂದ ಅಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ತೊಂದರೆಯಾಗಿದೆ. ಕುಡಿಯುವ ನೀರಿನ ವಿಚಾರದಲ್ಲಿ ವಿದ್ಯುಚ್ಛಕ್ತಿಯನ್ನು

ಒದಗಿಸಿಕೊಡುವ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡನ್ನು ವಿನಂತಿಸಿಕೊಳ್ಳಬಹುದು. ಇದರ ವಿಚಾರವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಈ 14 ಕೋಟಿ ರೂಪಾಯಿ ಪ್ರಾಜೆಕ್ಟನ್ನು ಆದಷ್ಟು ಬೇಗ ಮಾಡಬೇಕಾದರೆ ಮಂಗಳೂರು ಮಹಾನಗರಪಾಲಿಕೆಯವರು ಕೊಡಬೇಕಾದ ಹಣವನ್ನು ಆದಷ್ಟು ಬೇಗ ಕೊಟ್ಟರೆ ಉಳಿದ ಹಣವನ್ನು ಎಲ್.ಐ.ಸಿ., ಸಂಸ್ಥೆಯಂದ ತೆಗೆದುಕೊಂಡು ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಈಗಾಗಲೇ ಕೆಲವು ಕಡೆ ನೀರಿನ ಪೈಪುಗಳು ಇಲ್ಲವೋ ಅಂಥಾ ಕಡೆ ಸ್ವಲ್ಪ ಮಟ್ಟಿಗೆ ಕೊಳವೆ ಬಾವಿಗಳನ್ನು ತೋಡಲು ಈಗಾಗಲೇ ಡೆಪ್ಯುಟಿ ಕಮಿಷನರ್‌ರವರಿಗೆ ಹೇಳಿ ಹಣವನ್ನು ರಿಲೀಸ್ ಮಾಡಿದ್ದೇವೆ. ಅವರು ಕೊಳವೆ ಬಾವಿಗಳನ್ನು ತೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಈಗ ಮಾನ್ಯ ಕಂದಾಯ ಮಂತ್ರಿಗಳು ಸ್ಟೇಟ್ ಮೆಂಟ್ ಮಾಡಬೇಕು.

ಮಂತ್ರಿಗಳ ಹೇಳಿಕೆ.

ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಮೇಲೆ ಕಂದಾಯ ಮಂತ್ರಿಗಳ ಹೇಳಿಕೆ ಮತ್ತು ಚರ್ಚೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಇಲಾಖೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ,

1990ನೇ ಸಾಲಿನಲ್ಲಿ ರಾಜ್ಯದ ಬಹು ಭಾಗಗಳಲ್ಲಿ ಉಂಟಾದ ಮಳೆಯ ಅಭಾವದಿಂದಾಗಿ, ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿದೆ. ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗುವ ಲಕ್ಷಣಗಳು ಕಂಡು ಬರುತ್ತಿವೆ. ಅಭಾವ ಪರಿಸ್ಥಿತಿಯಿಂದಾಗಿ ಸಂಕಷ್ಟಕ್ಕೆ ಒಳಗಾದ ಜನರಿಗೆ ಪರಿಹಾರ ಕಲ್ಪಿಸುವ ದೃಷ್ಟಿಯಿಂದ ನಮ್ಮ ಸರ್ಕಾರವು ಅನೇಕ ಪರಿಹಾರೋಪಾಯಗಳನ್ನು ಕೈಗೊಂಡಿದೆ.

ರಾಜ್ಯದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಬಿಟ್ಟು ಉಳಿದ ಹೆಚ್ಚಿನ ಭಾಗದಲ್ಲಿ ಹಿಂಗಾರು ಮಳೆ ಎಲ್ಲ ಕಡೆ ಸರಿಯಾಗಿ ಬಿದ್ದಿಲ್ಲ. ಇದರಿಂದಾಗಿ ಖಾರಿಫ್ ಬೆಳೆ ತೆಗೆಯುವುದಕ್ಕೆ ಆಗಿಲ್ಲ. 1990ರ ಸಪ್ಟೆಂಬರ್ ತಿಂಗಳ ಅಂತ್ಯದವರೆಗೆ ನಮ್ಮ ರಾಜ್ಯದಲ್ಲಿ ಸುಮಾರು 100 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿತ್ತು. 1990ರ ಸೆಪ್ಟೆಂಬರ್ ನಂತರ ಈ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಿದೆ. ಈ ಅಭಾವ ಪರಿಸ್ಥಿತಿಯು ಮುಂಗಾರು ಮಳೆಯಿಂದಾಗಿ ಸುಧಾರಿಸಬಹುದೆಂಬ ನಂಬಿಕೆಯೂ ಹುಸಿಯಾಗಿದೆ. ಅಲ್ಲದೆ ಕೆರೆಗಳಲ್ಲಿರುವ ನೀರು ಒಣಗಿ ಅಭಾವ ಪೀಡಿತ ಪ್ರದೇಶಗಳಲ್ಲಿ ಅಂತರ್ ಜಲದ ಮಟ್ಟವು ಕಡಿಮೆಯಾಗಿ ಜನ ಮತ್ತು ಜಾನುವಾರುಗಳಿರಡಕ್ಕೂ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ಇಂಥ ಪರಿಸ್ಥಿತಿಯಲ್ಲಿ, ರಾಜ್ಯ ಸರ್ಕಾರವು ಗುರ್ತಿಸಿರುವ ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಎಲ್ಲ ಪರಿಹಾರ ಕ್ರಮ ಕೈಗೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಪರಿಹಾರ ಕಾಮಗಾರಿಗಳು ಈ ಕೆಳಕಂಡಂತಿವೆ.

1. ಬೆಳೆ ಬೆಳೆಯಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿಕೊಡುವುದು.
2. ಅಭಾವ ಪೀಡಿತ ನಗರ ಮತ್ತು ಗ್ರಾಮೀಣ ಪ್ರದೇಶಗಳಿರಡರಲ್ಲೂ ಕುಡಿಯುವ ನೀರಿನ ಸರಬರಾಜು.